

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಖಂದಕ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–10–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬನೂ ಖುರೈಝ್ ಗೋತ್ರದವರು ಒಪ್ಪಂದವನ್ನು ಮುರಿದ ಕಾರಣದಿಂದ ಅಹ್‌ಝಾಬ್ ಯುದ್ಧದ ನಂತರ ಅವರ ಕೋಟೆಗಳಿಗೆ ಮುತ್ತಿಗೆ ಹಾಕಲಾಗುತ್ತಿತ್ತು. ಮುಸ್ಲಿಮರಿಗೆ ನಷ್ಟ ಉಂಟುಮಾಡಿದ್ದಕ್ಕೆ ಮತ್ತು ಒಪ್ಪಂದವನ್ನು ಮುರಿದ ಕಾರಣದಿಂದ ಅವರಿಗೆ ಶಿಕ್ಷೆ ನೀಡಲಿಕ್ಕೆ ಹೀಗೆ ಮಾಡಲಾಗಿತ್ತು. ಇದರ ಬಗ್ಗೆ ಕಳೆದ ಖುತ್ಬದಲ್ಲಿ ಪ್ರಸ್ತಾಪಿಸಲಾಗಿತ್ತು. ಅದರ ಇನ್ನಷ್ಟು ವಿವರಣೆ ಹೀಗಿದೆ: ಮುತ್ತಿಗೆ ತೀವ್ರಗೊಂಡಾಗ ಹಝ್ರತ್ ಪೈಗಂಬರ್(ಸ)ರ ತೀರ್ಪು ಪ್ರಕಾರ ಬನೂ ಖುರೈಝ್ ಗೋತ್ರದವರು ಕೋಟೆಗಳಿಂದ ಹೊರಗೆ ಬಂದರು.

ಹದಿನಾಲ್ಕು, ಹದಿನೈದು ಅಥವಾ ಇಪ್ಪತ್ತೈದು ದಿನಗಳಷ್ಟು ಕಾಲ ಮುತ್ತಿಗೆ ಹಾಕಲಾಗಿತ್ತು ಎಂಬುದಾಗಿ ಬೇರೆ ಬೇರೆ ವರದಿಗಳು ಇವೆ. ಚರಿತ್ರೆಯ ವಿವಿಧ ವರದಿಗಳನ್ನು ಉಲ್ಲೇಖಿಸಿ ಈ ಮುತ್ತಿಗೆಯ ಕಾಲಾವಧಿ ಸುಮಾರು ಇಪ್ಪತ್ತು ದಿನಗಳಷ್ಟು ಆಗಿತ್ತು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳಿರುವರು. ಬನೂ ಖುರೈಝ್ ಗೋತ್ರದವರ ಬಗ್ಗೆ ತೀರ್ಪು ನೀಡಲು ಹಝ್ರತ್ ಸಅದ್ ಬಿನ್ ಮುಆಧ್(ರ)ರನ್ನು ತೀರ್ಪುಗಾರನಾಗಿ ಮಾಡಲಾಗಿತ್ತು. ಯಹೂದಿಯರನ್ನು ಬಂಧಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದಾಗ ಅವರನ್ನು ಹಗ್ಗಗಳಿಂದ ಕಟ್ಟಲಾಯಿತು. ಮಹಿಳೆಯರನ್ನು ಮತ್ತು ಮಕ್ಕಳನ್ನು ಬೇರ್ಪಡಿಸಲಾಗಿತ್ತು. ಅವರ ಕೋಟೆಗಳಿಂದ ಸಾವಿರದ ಐನ್ನೂರು ಖಡ್ಗಗಳು, ಮುನ್ನೂರು ಯುದ್ಧವಸ್ತ್ರಗಳು, ಎರಡು ಸಾವಿರ ಈಟಿಗಳು, ಸಾವಿರದ ಐನ್ನೂರು ಚರ್ಮದ ಗುರಾಣಿಗಳು ಮತ್ತು ಅನೇಕ ಪಾತ್ರೆಗಳು ಲಭಿಸಿದ್ದುವು. ಒಂಟೆಗಳು ಮತ್ತು ಇತರ ಜಾನುವಾರುಗಳು ಕೂಡ ಲಭಿಸಿದ್ದುವು. ಅವೆಲ್ಲವನ್ನು ಒಟ್ಟುಗೂಡಿಸಲಾಯಿತು. ಬನೂ ಖುರೈಝ್ ಗೋತ್ರ ನಮ್ಮ ಮಿತ್ರ ಪಕ್ಷವಾಗಿದೆ; ಆದ್ದರಿಂದ ಅವರನ್ನು ಕ್ಷಮಿಸಿರಿ ಎಂದು ಔಸ್ ಗೋತ್ರದ ಪ್ರಮುಖರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಅವರು ಒತ್ತಾಯಪಡಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಿಮ್ಮಲ್ಲಿ ಒಬ್ಬ ವ್ಯಕ್ತಿಗೆ ಅವರ ಬಗ್ಗೆ ತೀರ್ಪು ನೀಡುವ ಹೊಣೆಗಾರಿಕೆಯನ್ನು ವಹಿಸಿಕೊಡಲು ನೀವು ಒಪ್ಪುತ್ತೀರಾ? ಅವರು ಸಮ್ಮತಿಸಿದಾಗ ಈ ವಿಷಯವನ್ನು ಹಝ್ರತ್ ಸಅಧ್ ಬಿನ್ ಮುಆಧ್(ರ)ರಿಗೆ ಒಪ್ಪಿಸಲಾಯಿತು. ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಸಹಾಬಿಯರಲ್ಲಿ ಯಾರನ್ನು ಬೇಕಾದರೂ ನೀವು ಆಯ್ಕೆ ಮಾಡಿರಿ. ಆಗ ಅವರು ಹಝ್ರತ್ ಸಅದ್ ಬಿನ್ ಮುಆಧ್(ರ)ರನ್ನು ಆಯ್ಕೆ ಮಾಡಿದರು. ಹಝ್ರತ್ ಸಅದ್(ರ) ಔಸ್ ಗೋತ್ರದ ಮುಖಂಡರಾಗಿದ್ದರು ಮತ್ತು ಬನೂ ಖುರೈಝ್ ಗೋತ್ರದ ಮಿತ್ರರಾಗಿದ್ದರು. ಆದ್ದರಿಂದ ವಿಷಯ ನಮ್ಮ ಪರವಾಗಿ ಇರುವುದು ಮತ್ತು ಅರೇಬಿಯದ ಸಂಪ್ರದಾಯ ಪ್ರಕಾರ ಹಝ್ರತ್ ಸಅದ್(ರ) ತಮ್ಮ ಮಿತ್ರ ಗೋತ್ರಕ್ಕಾಗಿ ರಿಯಾಯಿತಿ ಮಾಡುವರು ಎಂದು ಅವರು ಭಾವಿಸಿದರು. ಆದರೆ ಹಝ್ರತ್ ಸಅದ್(ರ)ರ ಪರಿಶುದ್ಧ ಮತ್ತು ಪ್ರಾಮಾಣಿಕ ಹೃದಯವು ಅಲ್ಲಾಹನಿಗೆ ಮತ್ತು ಅವನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇತರ ಎಲ್ಲ ಸಂಬಂಧಗಳಿಗಿಂತ ಪ್ರಾಮುಖ್ಯತೆ ನೀಡಿತ್ತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಕುರಿತು ಬರೆಯುತ್ತಾರೆ: ಔಸ್ ಗೋತ್ರದ ಕೆಲವು ಜನರು ಹಝ್ರತ್ ಸಅದ್(ರ)ರೊಡನೆ ಒತ್ತಾಯಪೂರ್ವಕವಾಗಿ ಹೀಗೆ ವಿನಂತಿ ಮಾಡಿದರು: ಖುರೈಝ್ ಗೋತ್ರ ನಮ್ಮ ಮಿತ್ರ ಗೋತ್ರವಾಗಿದೆ. ಯಾವ ರೀತಿಯಲ್ಲಿ ಖಝ್ರಜ್ ಗೋತ್ರ ತನ್ನ ಮಿತ್ರ ಪಕ್ಷವಾದ ಬನೂ ಖೈನ್‌ಖಾಅ್ ಗೋತ್ರದೊಂದಿಗೆ ಸೌಮ್ಯತೆ ತೋರಿಸಿತೋ ಅದೇ ರೀತಿಯಲ್ಲಿ ನೀವು ಸಹ ಖುರೈಝ್ ಗೋತ್ರದೊಂದಿಗೆ ರಿಯಾಯಿತಿ ತೋರಿಸಿರಿ ಮತ್ತು ಅವರನ್ನು ಕಠಿಣವಾದ ಶಿಕ್ಷೆಗೆ ಗುರಿಪಡಿಸಬೇಡಿರಿ. ಸಅದ್ ಬಿನ್ ಮುಆಧ್(ರ) ಮೊದಲು ಮೌನವಾಗಿ ಇದ್ದುಕೊಂಡು ಅವರ ಮಾತುಗಳನ್ನು ಆಲಿಸುತ್ತಿದ್ದರು. ಆದರೆ ಅವರು ಇನ್ನಷ್ಟು ಒತ್ತಾಯಪಡಿಸಿದಾಗ ಹೀಗೆ ಹೇಳಿದರು: ಇದು ಸತ್ಯ ಮತ್ತು ನ್ಯಾಯದ ವಿಷಯದಲ್ಲಿ ಯಾವನೇ ದೂಷಿಸುವವನ ದೂಷಣೆಯನ್ನು ಸಅದ್ ಪರಿವೆ ಮಾಡದಂತಹ ಸಮಯವಾಗಿದೆ. ಈ ಉತ್ತರವನ್ನು ಆಲಿಸಿ ಜನರು ಸುಮ್ಮನಾದರು.

ತನ್ನ ತೀರ್ಪನ್ನು ಸ್ವೀಕಾರ ಮಾಡಬೇಕೆಂದು ಉಭಯ ಪಕ್ಷಗಳಿಂದಲೂ ವಾಗ್ದಾನ ಪಡೆದ ನಂತರ ಹಝ್ರತ್ ಸಅದ್ ಬಿನ್ ಮುಆಧ್(ರ) ತನ್ನ ತೀರ್ಪನ್ನು ಹೀಗೆ ತಿಳಿಸಿದರು: ಬನೂ ಖುರೈಝ್ ಗೋತ್ರದ ಯೋಧರನ್ನು ವಧಿಸಬೇಕು ಹಾಗೂ ಅವರ ಮಹಿಳೆಯರನ್ನು ಮತ್ತು ಮಕ್ಕಳನ್ನು ಬಂಧಿಸಬೇಕು ಹಾಗೂ ಅವರ ಸಂಪತ್ತುಗಳನ್ನು ಮುಸ್ಲಿಮರಿಗೆ ವಿತರಣೆ ಮಾಡಬೇಕು. ತೀರ್ಪನ್ನು ಆಲಿಸಿದಾಗ ಹಝ್ರತ್ ಪೈಗಂಬರ್(ಸ) ತಕ್ಷಣ ಹೀಗೆ ಹೇಳಿದರು: **ಲಖದ್ ಹಕಮ್ತ ಬಿಹುಕ್‌ಮಿಲ್ಲಾಹಿ.** ಎಂದರೆ ನಿಮ್ಮ ಈ ತೀರ್ಪು ದೈವಿಕ ವಿಧಿಯಾಗಿದೆ.

ಹಝ್ರತ್ ಪೈಗಂಬರ್(ಸ)ರ ಈ ಮಾತುಗಳ ತಾತ್ಪರ್ಯವೇನೆಂದರೆ, ಬನೂ ಖುರೈಝರ ಕುರಿತು ಈ ತೀರ್ಪಿನಲ್ಲಿ ಸ್ಪಷ್ಟವಾಗಿ ದೈವಿಕ ಕೈ ಇದೆ ಎಂದು ಕಾಣಬಹುದಾಗಿದೆ; ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ಕಾರುಣ್ಯದ ಗುಣ ಈ ವಿಧಿಯನ್ನು ತಡೆಯಲು ಸಾಧ್ಯವಿರಲಿಲ್ಲ. ಹಝ್ರತ್ ಸಅದ್(ರ)ರ ತೀರ್ಪಿನ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಒಂದು ವರದಿಯಿದೆ: ಈ ತೀರ್ಪಿನ ಬಗ್ಗೆ ದೇವದೂತರು ನನಗೆ ಸಹರಿ ಸಮಯದಲ್ಲಿ ತಿಳಿಸಿದ್ದರು. ಹಝ್ರತ್ ಸಅದ್(ರ)ರ ತೀರ್ಪಿನ ನಂತರ ಹಝ್ರತ್ ಪೈಗಂಬರ್(ಸ) ಧುಲ್‌ಹಜ್ಜ ಒಂಬತ್ತರಲ್ಲಿ ಮತ್ತೊಂದು ವರದಿಯ ಪ್ರಕಾರ ಧುಲ್‌ಹಜ್ಜ ಏಳರಲ್ಲಿ ಗುರುವಾರದಂದು ಮದೀನಕ್ಕೆ ಮರಳಿ ಹೋದರು. ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಕೈದಿಗಳನ್ನು ಮದೀನದಲ್ಲಿ ಹಝ್ರತ್ ಉಸಾಮ ಬಿನ್ ಝೈದ್(ರ)ರ ಮನೆಗೆ ಹಾಗೂ ಮಹಿಳೆಯರನ್ನು ಮತ್ತು ಮಕ್ಕಳನ್ನು ಹಝ್ರತ್ ರಮ್ಲ ಬಿನ್ತ್ ಹಾರಿಸ್(ರ)ರ ಮನೆಗೆ ತರಲಾಯಿತು. ಬನೂ ಖುರೈಝು ಗೋತ್ರದವರಿಗೆ ತಿನ್ನಲಿಕ್ಕಾಗಿ ರಾಶಿ ರಾಶಿಯಾಗಿ ಹಣ್ಣುಗಳನ್ನು ಒದಗಿಸಲಾಯಿತು. ಯಹೂದಿಯರು ರಾತ್ರಿ ಪೂರ್ತಿ ಹಣ್ಣು ತಿನ್ನುವುದರಲ್ಲಿ ತಲ್ಲೀನರಾಗಿದ್ದರು ಎಂದು ಬರೆಯಲಾಗಿದೆ. ಹಝ್ರತ್ ಪೈಗಂಬರ್(ಸ) ಬನೂ ಖುರೈಝು ಗೋತ್ರದ ಮೇಲೆ ದೌರ್ಜನ್ಯ ಮಾಡಿರುವರು ಎಂಬುದಾಗಿ ಹಝ್ರತ್ ಸಅದ್(ರ)ರ ತೀರ್ಪಿನ ಬಗ್ಗೆ ಅನ್ಯರು ಮತ್ತು ಆಕ್ಷೇಪ ಮಾಡುವ ಕೆಲವು ಜನರು ನಮ್ಮ ಯುವಕರ ಮನಸ್ಸುಗಳಿಗೆ ವಿಷ ತುಂಬಿಸುತ್ತಾರೆ. ಇದರ ಬಗ್ಗೆ ಒಂದು ಸ್ಪಷ್ಟವಾದ ಉತ್ತರವೇನೆಂದರೆ, ಈ ತೀರ್ಪನ್ನು ಹಝ್ರತ್ ಪೈಗಂಬರ್(ಸ) ಸ್ವತಃ ಮಾಡಿರಲಿಲ್ಲ. ಬದಲಾಗಿ ಅಲ್ಲಾಹನು ಈ ತೀರ್ಪನ್ನು ಅವರ ಮಿತ್ರ ಪಕ್ಷದ ಮೂಲಕ ಮಾಡಿಸಿದನು. ಅದರಲ್ಲೂ (ತೀರ್ಪನ್ನು ಸ್ವೀಕರಿಸುವುದಾಗಿ ಮುಂಚಿತವಾಗಿಯೇ) ಹಝ್ರತ್ ಪೈಗಂಬರ್(ಸ)ರಿಂದ ಸುದೃಢವಾದ ವಾಗ್ದಾನ ಪಡೆಯಲಾಗಿತ್ತು.

ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಬಹಳ ದುಃಖದಿಂದ ಹೀಗೆ ಹೇಳಿದರು: **ಲೌ ಆಮನ ಬೀ ಅಶರತುನ್ ಮಿನಲ್ ಯಹೂದಿ ಲಆಮನತ್ ಬಿಯಲ್ ಯಹೂದು**. ಎಂದರೆ ಯಹೂದಿಯರಲ್ಲಿ ಪ್ರಮುಖರಾದ ಹತ್ತು ಜನರು ನನ್ನಲ್ಲಿ ವಿಶ್ವಾಸ ಹೊಂದುತ್ತಿದ್ದರೆ, ಯಹೂದಿಯರ ಈ ಪೂರ್ತಿ ಸಮುದಾಯ ನನ್ನಲ್ಲಿ ವಿಶ್ವಾಸ ಹೊಂದುತ್ತಿದ್ದರು ಹಾಗೂ ದೈವಿಕ ಶಿಕ್ಷೆಯಿಂದ ಪಾರಾಗುತ್ತಿದ್ದರು ಎಂಬ ಪ್ರತೀಕ್ಷೆಯನ್ನು ನಾನು ಅಲ್ಲಾಹನಲ್ಲಿ ಇರಿಸುತ್ತಿದ್ದೆ.

ಮರುದಿನ ಬೆಳಿಗ್ಗೆ ಹಝ್ರತ್ ಸಅದ್ ಬಿನ್ ಮುಆಧ್(ರ)ರ ತೀರ್ಪು ಜಾರಿಯಾಗಬೇಕಿತ್ತು. ತೀರ್ಪು ಜಾರಿಯಾಗುವ ವೇಳೆ ಯಾವುದಾದರೂ ನಿರ್ದೇಶನದ ಅವಶ್ಯಕತೆ ಬರುವುದಾದರೆ ತಡಮಾಡದೇ ನಿರ್ದೇಶನ ನೀಡುವ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಸ್ವತಃ ಸಮೀಪದಲ್ಲೇ ಒಂದು ಜಾಗದಲ್ಲಿ ಕುಳಿತುಕೊಂಡಿದ್ದರು. ನ್ಯಾಯಾಲಯದ ದೃಷ್ಟಿಯಲ್ಲಿ ಹಝ್ರತ್ ಸಅದ್(ರ)ರ ತೀರ್ಪಿಗೆ ಮೇಲ್ಮನವಿ ಎಂಬಂತೆ ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಲು ಸಾಧ್ಯವಿರಲಿಲ್ಲ. ಆದರೆ ಒಬ್ಬ ಅರಸ ಅಥವಾ ರಾಜ್ಯದ ಪ್ರಧಾನಿ ಎಂಬ ನಿಟ್ಟಿನಲ್ಲಿ ಯಾವನಾದರೂ ವ್ಯಕ್ತಿಯ ಕುರಿತು ಯಾವುದಾದರೂ ವಿಶಿಷ್ಟ ಕಾರಣದಿಂದ ದಯೆದೋರಿಸಬೇಕು ಎಂದು ಮಾಡುವ ಮನವಿಯನ್ನು ಹಝ್ರತ್ ಪೈಗಂಬರ್(ಸ) ಆಲಿಸಬಹುದಾಗಿತ್ತು.

ಅಪರಾಧಿಗಳನ್ನು ಒಬ್ಬೊಬ್ಬರನ್ನಾಗಿ ವಧಿಸಲು ಎಂದರೆ, ಒಬ್ಬನನ್ನು ವಧಿಸುವಾಗ ಮತ್ತೊಬ್ಬನು ಸಮೀಪ ಇಲ್ಲದ ರೀತಿಯಲ್ಲಿ ವಧಿಸಲು ಹಝ್ರತ್ ಪೈಗಂಬರ್(ಸ) ತನ್ನ ಕಾರುಣ್ಯದ ಕಾರಣದಿಂದ ಆದೇಶ ನೀಡಿದರು. ಬನೂ ನಝೀರಿನ ಮುಖಂಡ ಹುಯ್ಯ್ ಬಿನ್ ಅಖ್ತಬ್‌ನ ಸರದಿ ಬಂದಾಗ ಆತ ಹಝ್ರತ್ ಪೈಗಂಬರ್(ಸ)ರನ್ನು ನೋಡಿ ಹೀಗೆ ಹೇಳಿದನು: ಹೇ ಮುಹಮ್ಮದ್, (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಿಮ್ಮನ್ನು ಏಕೆ ವಿರೋಧಿಸಿದೆ ಎಂಬುದರ ಬಗ್ಗೆ ನನಗೆ ದುಃಖವಿಲ್ಲ. ಆದರೆ ಸಂಗತಿ ಏನೆಂದರೆ, ಯಾರು ದೇವನನ್ನು ಉಪೇಕ್ಷಿಸುತ್ತಾನೋ ಆತನನ್ನು ದೇವನು ಕೂಡ ಉಪೇಕ್ಷಿಸುತ್ತಾನೆ. ಇದು ಅವನದೇ ಆದೇಶ ಮತ್ತು ವಿಧಿಯಾಗಿದೆ ಎಂದು ಹೇಳಿದನು. ಅದೇ ರೀತಿಯಲ್ಲಿ ಖುರೈಝುದ ನೇತಾರ ಕಅ್‌ಬ್ ಬಿನ್ ಅಸದ್‌ನನ್ನು ತರಲಾದಾಗ ಹಝ್ರತ್ ಪೈಗಂಬರ್(ಸ) ಸೂಚನೆ ರೂಪದಲ್ಲಿ ಆತನೊಡನೆ ಮುಸ್ಲಿಮನಾಗಲು ಮನವಿ ಮಾಡಿದರು. ಆತನು ಹೇಳಿದನು: ಹೇ ಅಬುಲ್‌ಖಾಸಿಮ್, ನಾನು ಮುಸ್ಲಿಮನಾಗುತ್ತಿದ್ದೆ. ಆದರೆ ಮರಣಕ್ಕೆ ಹೆದರಿ ಹಾಗೆ ಮಾಡಿದ್ದೇನೆ ಎಂದು ಜನರು ಹೇಳುವರು. ಆದ್ದರಿಂದ ನನ್ನನ್ನು ಯಹೂದಿ ಧರ್ಮದಲ್ಲೇ ಮೃತನಾಗಲು ಬಿಡು.

ಈ ಯುದ್ಧದ ಫಲವಾಗಿ ಸಂಗ್ರಹಗೊಂಡ ಯುದ್ಧ ಸಂಪತ್ತನ್ನು ಹಝ್ರತ್ ಪೈಗಂಬರ್(ಸ) ಸಹಾಬಿಯರ ನಡುವೆ ವಿತರಣೆ ಮಾಡಿದರು. ಕೆಲವು ಮಹಿಳೆಯರಿಗೂ ಅದರಿಂದ ಪಾಲು ನೀಡಲಾಯಿತು. ಇತರ ಕೈದಿಗಳ ಕುರಿತು ಅನೇಕ ಚರಿತ್ರೆಯ ಗ್ರಂಥಗಳಿಂದ ಸಾಕಷ್ಟು ಅನ್ವೇಷಣೆ ನಡೆಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಹಝ್ರತ್ ಪೈಗಂಬರ್(ಸ) ಅವರನ್ನು ನಜದಿನ ಕಡೆಗೆ ಕಳುಹಿಸಿದರು ಎಂದು ಕೆಲವು ವರದಿಗಳಿಂದ ತಿಳಿದುಬರುತ್ತದೆ. ಅಲ್ಲಿ ನಜದಿನ ಕೆಲವು ಗೋತ್ರಗಳು ಅವರ ಪರವಾಗಿ ಪರಿಹಾರ ಧನವನ್ನು ನೀಡಿ ಅವರನ್ನು ಬಿಡುಗಡೆಗೊಳಿಸಿದ್ದರು. ಆ ಹಣದಿಂದ ಮುಸ್ಲಿಮರು ಯುದ್ಧಕ್ಕಾಗಿ ತಮಗೆ ಬೇಕಾದ ಅಗತ್ಯ ಸಾಮಾನುಗಳಾದ ಕುದುರೆಗಳನ್ನು ಮತ್ತು ಆಯುಧಗಳನ್ನು ಖರೀದಿ ಮಾಡಿದ್ದರು. ಹೀಗೆ ನಡೆದಿರಬಹುದು ಎಂಬುದು ಸಾಧ್ಯತೆಯಿಲ್ಲದ ಸಂಗತಿಯೇನಲ್ಲ. ಏಕೆಂದರೆ ನಜದಿ ಗೋತ್ರಗಳು ಮತ್ತು ಬನೂ ಖುರೈಝು ಗೋತ್ರ ಪರಸ್ಪರ ಮಿತ್ರ ಗೋತ್ರಗಳಾಗಿದ್ದುವು. ಆದರೆ ಈ ಕೈದಿಗಳು ಮದೀನದಲ್ಲೇ ಇದ್ದರು ಎಂದು ಪ್ರಬಲ ವರದಿಗಳಿಂದ ತಿಳಿದುಬರುತ್ತದೆ. ಸಂಪ್ರದಾಯ ಪ್ರಕಾರ ಹಝ್ರತ್ ಪೈಗಂಬರ್(ಸ) ಆ ಕೈದಿಗಳನ್ನು ಮೇಲ್ನೋಟಕ್ಕಾಗಿ ಬೇರೆ ಬೇರೆ ಸಹಾಬಿಯರಿಗೆ ವಿತರಣೆ ಮಾಡಿದರು. ಅವರಲ್ಲಿ

ಕೆಲವರು ತಮ್ಮ ಪರಿಹಾರ ಧನವನ್ನು ಪಾವತಿ ಮಾಡಿ ಬಿಡುಗಡೆ ಪಡೆದಿದ್ದರು. ಕೆಲವರನ್ನು ಹಝ್ರತ್ ಪೈಗಂಬರ್(ಸ) ಸುಮ್ಮನೇ ಔದಾರ್ಯವೆಂಬಂತೆ ಬಿಡುಗಡೆಗೊಳಿಸಿದ್ದರು. ಆ ಜನರು ಅನಂತರ ಮೆಲ್ಲಮೆಲ್ಲನೆ ಸ್ವಂತ ಇಷ್ಟ ಪ್ರಕಾರ ಮುಸ್ಲಿಮರಾದರು.

ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಆದೇಶವನ್ನು ನೀಡಿದರು. ಅದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯದ ವಿಶಾಲತೆ ಮತ್ತು ಸ್ತ್ರೀಯರ ಹಿತೈಷಿ ಎಂಬ ರೀತಿಯಲ್ಲಿ ಸ್ವರ್ಣಲಿಪಿಯಿಂದ ಬರೆಯಲು ಯೋಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ವಿತರಣೆ ಮಾಡಲ್ಪಡುವ ಅಥವಾ ಮಾರಾಟಗೊಳ್ಳಲ್ಪಡುವ ಮಹಿಳೆಯರ ಜೊತೆಗೆ ಸಣ್ಣ ಮಗು ಇರುವುದಾದರೆ ಮಗು ಪ್ರೌಢ ವಯಸ್ಸಿಗೆ ತಲುಪುವ ವರೆಗೆ ತಾಯಿಯಿಂದ ಬೇರ್ಪಡಿಸಬಾರದು. ಅದೇ ರೀತಿಯಲ್ಲಿ ಇಬ್ಬರು ಕಿರಿಯ ಸಹೋದರಿಗಳು ಇರುವುದಾದರೆ ಅವರನ್ನು ಸಹ ಪೌಢ ವಯಸ್ಸಿಗೆ ತಲುಪುವ ತನಕ ಬೇರ್ಪಡಿಸಬಾರದು. ಇದಾಗಿದೆ ಲೋಕಕ್ಕೆ ಕಾರುಣ್ಯನಿಧಿಯಾದ ಪ್ರವಾದಿಯ ಕೃತ್ಯ ಮತ್ತು ಮಹಿಳೆಯರು, ಕೈದಿಗಳು ಮತ್ತು ತನ್ನ ವಿರೋಧಿಗಳ ಮೇಲಿನ ಔದಾರ್ಯ. ಆದರೆ ಇಂದು ಮುಸ್ಲಿಮರ ಸ್ಥಿತಿಯನ್ನು ನೋಡಿರಿ, ಅಲ್ಲಾಹನ ಮತ್ತು ಅವನ ಪ್ರವಾದಿಯ ಹೆಸರಲ್ಲಿ ಜನರನ್ನು ಮನೆಯಿಂದ ಹೊರಗೆ ಹಾಕುತ್ತಾರೆ ಮತ್ತು ಕೊಲೆ ಮಾಡುತ್ತಾರೆ. ಅನಂತರ ಅದರ ಫಲಿತಾಂಶ ಏನೆಂದರೆ, ಮುಸ್ಲಿಮರ ಸ್ವಂತ ಗೌರವ ಕೊನೆಗೊಳ್ಳುತ್ತಿದೆ. ಅಲ್ಲಾಹನು ಮುಸ್ಲಿಮರಿಗೂ ಬುದ್ಧಿ ಮತ್ತು ವಿವೇಕ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak'***, *Islamabad, Tilford,* U.K. On 25-10-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon